# ಮರುಭೂಮಿಯಲ್ಲಿ ಹಣ್ಣು–ಹೂವು

ಹಣ್ಣು ಹೂವಿಗೂ ಮರಳುಗಾಡಿನ ಪರಿಸರಕ್ಕೂ ಎತ್ತಣ ಸಂಬಂಧ? ದಿಗಂತದುದ್ದಕ್ಕೂ ಮೈಚಾಚಿಕೊಂಡಿರುವ ಮರಳುಗಾಡನ್ನು ಹೊಂದಿರುವ ದೇಶಗಳು ಫಲ–ಪುಷ್ಪ ಸಮೃದ್ಧಿಯಿಂದ ಕೂಡಿರುವುದನ್ನು ಕಾಣಿಸುವ ಈ ವಿಶಿಷ್ಟ ಬರಹ, ಮರುಭೂಮಿಯ ಕುರಿತ ನಮ್ಮ ಕಲ್ಪನೆಯನ್ನೇ ಬದಲಾಯಿಸುವಂತಿದೆ.

■ ರಹಮತ್ ತರೀಕೆರೆ



ಇರಾಕ್, ಇರಾನ್, ಅರೇಬಿಯಾ, ಜೋರ್ಡಾನುಗಳಲ್ಲಿ ಎದ್ದುಕಾಣುವ ಭೌಗೋಳಿಕ ಮೇಲ್ಮೈಯೆಂದರೆ ದಿಗಂತದವರೆಗೆ ಮೈಚಾಚಿರುವ ಗೋಧಿಬಣ್ಣದ ಮರುಭೂಮಿ; ಅದರ ಬೈತಲೆ ತೆಗೆದಂತೆ ಗೆರೆಯೋಪಾದಿಯಲ್ಲಿ ನೇರವಾಗಿ ಸಾಗುವ ನೂರಾರು ಕಿ.ಮೀ. ಫಾಸಲೆಯ ರಸ್ತೆ; ಸಾಲುಮರಗಳಿಲ್ಲದ ರಸ್ತೆಯ ಎರಡೂ ಬದಿ ಕಾವಲು ನಿಂತ ಬೋಳುಬೆಟ್ಟಗಳು; ನೆಲದ ಮೇಲೆ ಕಳೆಯಂತೆ ಬೆಳೆದ ಕುರುಚಲು ಪೊದೆ; ಕಡಲಲೆಗಳಂತೆ ಹರಡಿದ ನಿಶ್ಚಲ ನಿರ್ಲಿಪ್ತ ಉಸುಕು; ಓಯಸಿಸ್‌ನ ಆಸುಪಾಸುಗಳಲ್ಲಿ ಕಾಣುವ ನೀರು ಮತ್ತು ಖರ್ಜೂರದ ತೋಪು; ಅಲ್ಲಲ್ಲಿ ಮೇಯುವ ಒಂಟೆ–ಕುರಿಗಳ ಹಿಂಡು. ಇರಾಕಿನಲ್ಲಿ ಮಾತ್ರ ಹಾದಿಯಲ್ಲಿ ಯೂಫ್ರತೀಸ್–ತಿಗ್ರಿಸ್ ಎಂಬ ಹೊಳೆಗಳು ಎಡತಾಕುತ್ತವೆ. ಈ ನದಿಗಳು ಆಳವಾಗಿ ಕಲರವವಿಲ್ಲದೆ ನಿಶ್ಶಬ್ದ ಹರಿಯುತ್ತವೆ. ಶುಷ್ಕ ಮರುಭೂಮಿಯಲ್ಲಿ ಪೈರುಪಚ್ಚೆಯನ್ನೂ ಹಣ್ಣುಹೂವನ್ನು ಬೆಳೆಸಿ ಸಾವಿರಾರು ಕಿ.ಮೀ. ಹರಿದು ಪರ್ಷಿಯನ್ ಕೊಲ್ಲಿಯನ್ನು ಸೇರುತ್ತವೆ.

ನಾನು–ಬಾನು ಕೂಡಿಕೊಂಡು, ಇರಾಕಿನ ಬಗ್ದಾದಿನಿಂದ ಬಸ್ರಾ, ಇರಾನಿನ ತೆಹರಾನಿನಿಂದ ಖೋಮ್, ಮಶಾದಿನಿಂದ ತೆಹರಾನ್, ಅರೇಬಿಯಾದಲ್ಲಿ ತಾಯಿಫಾದಿಂದ ಮೆಕ್ಕಾ–ಮದೀನ, ರಿಯಾದಿನಿಂದ ದಮ್ಮಾಂ ಮೊದಲಾಗಿ ಅನೇಕ ನಿಡಿದಾದ ಹಾದಿಗಳಲ್ಲಿ ಪಯಣಿಸಿದೆವು. ಓಯಸಿಸ್ ಮತ್ತು ನದಿ ಪ್ರದೇಶಗಳಲ್ಲಿ ಹಣ್ಣಿನ ತೋಟಗಳನ್ನು ಕಂಡೆವು. ರಸ್ತೆಬದಿಯ ಅಂಗಡಿಗಳಲ್ಲಿ ಕಲ್ಲಂಗಡಿ, ಕರಬೂಜ, ಅನಾನಸು, ದ್ರಾಕ್ಷಿ, ಸೇಬು, ಅಂಜೂರ, ಮೋಸಂಬಿ ಕಿಕ್ಕಿರಿದಿದ್ದವು. ನಮಗೆ ಕಾಣದೆ ಹೋಗಿದ್ದು ಪಪಾಯಿ, ಸೀಬೆ, ಮಾವು. ರೈತರು ತೋಟಗಳ ಬದಿ ಹಣ್ಣಿನ ರಾಶಿಯಿಟ್ಟುಕೊಂಡು ಚಲಿಸುವ ವಾಹನಿಗರನ್ನು ಕರೆಯುತ್ತಿದ್ದರು; ಹಳ್ಳಿಯ ಸಂತೆಗಳಲ್ಲಿ ಬೈಕಿಗೆ ಲಗತ್ತಾದ ಕೈಗಾಡಿಯಲ್ಲಿ ತಂದು ಮಾರುತ್ತಿದ್ದರು. ಪಟ್ಟಣದ ಮಾರುಕಟ್ಟೆಗಳಲ್ಲಿ ಅಕ್ರೋಟ, ಬಾದಾಮಿ, ಖರ್ಜೂರ, ಒಣದ್ರಾಕ್ಷಿಯ ಗೋದಾಮುಗಳು ಸಾಲುಸಾಲು. ಕೆಲವರು ಹಣ್ಣಿನ ಜತೆ ಒಣಗಿದ ಗಸಗಸೆ ಕಾಯನ್ನೂ ಇಟ್ಟಿದ್ದರು. ಖರ್ಜೂರದ ಸುಳಿಗರ್ಭವನ್ನು ಗಿಣ್ಣದಂತೆ ಕತ್ತರಿಸಿ ಕೊಡುತ್ತಿದ್ದರು. ಮರುಭೂಮಿಯಲ್ಲಿ ಇಷ್ಟೊಂದು ಹಣ್ಣುಹಂಪಲು ಹೇಗೆ ಸಾಧ್ಯ? ಸೋಜಿಗವಾಗುತಿತ್ತು.



ನಾವು ಇರಾಕ್–ಇರಾನುಗಳಿಗೆ ಹೋದಾಗ ಚಳಿಗಾಲ ಇನ್ನೇನು ಶುರುವಾಗುತ್ತಿತ್ತು. ನದಿಗಳ ದಯೆಯಿಂದಲೋ ಚಳಿಗಾಲದ ತಂಪಿನಿಂದಲೋ ಹೊಲದೋಟಗಳು ಭರಪೂರ ಫಲ ತಳೆದಿದ್ದವು. ಬಹುಶಃ ಹಣ್ಣುಗಳ ಋತುವಿರಬೇಕು. ಇರಾಕಿನಲ್ಲಿ ಹೆಚ್ಚಿನ ಹಣ್ತೋಟಗಳು ಮೊಸುಲ್ ಪಟ್ಟಣದ ಹಾದಿಯಲ್ಲಿ ಎದುರಾದವು. ಬ್ಯಾಬಿಲೋನಿಯಾ ಭಾಗದಲ್ಲಿ ಹಿಲ್ಲಾ

